



(43ನೇ ಪುಟದಿಂದ)
ಗೋಚರವಾಗುತ್ತದೆ. ಇಪ್ಪತ್ತೈದಕ್ಕೆ ಮಿಕ್ಕಿ ಕೋಣೆಗಳಿವೆ. ಹಲಸು, ಹೆಬ್ಬಲಸು, ಸಾಗುವಾನಿ ಮರಗಳ ದಪ್ಪ ಗಾತ್ರದ ತೊಲೆಗಳನ್ನು ಬಳಸಿದ್ದು ಮನೆಯ ಬೆಲೆ ಹೆಚ್ಚಿಸಿದೆ. ಮನೆಯ ಚಾವಡಿಯಲ್ಲಿರುವ ವಿಶಿಷ್ಟ ಪಟ್ಟದ ಮಂಚದಲ್ಲಿ ಕೂಡುವ ಹಕ್ಕಿರುವುದು ಪಟ್ಟವಾದವರಿಗೆ ಮಾತ್ರ. ಧರ್ಮಸ್ಥಳದ ಹೆಗ್ಗಡೆಯವರು, ಸನ್ಯಾಸಿಗಳು ಬಿಟ್ಟರೆ ಮನೆಯವರೂ ಅದರಲ್ಲಿ ಕೂಡುವಂತಿಲ್ಲ. ಹಿಂದೆ ಮದುವೆಗಳು ಆಗುತ್ತಿದ್ದುದು ಮನೆಯಂಗಳದಲ್ಲೇ ಎಂಬುದರ ಕುರುಹಾಗಿ ಮದುವೆ ಮಂಟಪ ಅಂಗಳದಲ್ಲಿದೆ. ಮದುಮಕ್ಕಳ ಮೆರವಣಿಗೆಯ ವಿಶಿಷ್ಟ ಪಲ್ಲಕಿಯೂ ಮನೆಯೊಳಗಿದೆ. ಮನೆ ಹಿಂಭಾಗದಲ್ಲಿ ಅಂದು ನೂರೈವತ್ತು ಮಂದಿ ಒಮ್ಮೆಲೇ ಭೋಜನಕ್ಕೆ ಕೂಡುತ್ತಿದ್ದ ವಿಸ್ತಾರವಾದ ಕೊಠಡಿಯಿದೆ.

ಚಂದಯ್ಯ ಅಜ್ರಿ ಮೂರು ಅಡುಗೆ ಕೋಣೆ ಕಟ್ಟಿಸಿದ್ದರು. ಒಂದರಲ್ಲಿ ಜೈನ ಯತಿಗಳಿಗೆ ಮಾತ್ರ ಅಡುಗೆ. ಇನ್ನೆರಡು– ಬೇಸಿಗೆಗೊಂದು; ಮಳೆಗಾಲಕ್ಕೊಂದು. ಬೃಹದಾಕೃತಿಯ ಮೂರು ಕಡೆಯುವ ಕಲ್ಲುಗಳನ್ನು ಈಗ ಮಿಸುಕಾಡಿಸುವವರಿಲ್ಲ. ಇದರಲ್ಲೊಂದು ಕಲ್ಲು ಸಾಮಾನ್ಯವಾದ ವೃತ್ತಾಕಾರವಿರದೆ ಚೌಕಾಕೃತಿಯಲ್ಲಿ ಇರುವುದು ವಿಶೇಷ. ದೇವಾಲಯಗಳು ಮತ್ತು ಊರಿನ ಬಡವರ ಸಮಾರಂಭಗಳ ಬಳಕೆಗೆ ಉಚಿತವಾಗಿ ಕೊಡುತ್ತಿದ್ದ ತಾಮ್ರ, ಹಿತ್ತಾಳೆಯ ಭಾರೀ ಪಾತ್ರೆಗಳ ರಾಶಿಯೇ ಒಂದು ಕೋಣೆಯಲ್ಲಿದೆ. ಅಷ್ಟಮಂಗಲ ಪೂಜಾದಿ ಧಾರ್ಮಿಕ ವಿಧಿಗಳಿಗೆ ಬೇಕಾಗುವ ಆರತಿಗಳು, ದೀಪಗಳು, ಹರಿವಾಣಗಳು ಮುಂತಾದ ಪರಿಕರಗಳ ದೊಡ್ಡ ರಾಶಿ ಇದೆ.

## ಪುರಾತನ ವಸ್ತುಸಂಗ್ರಹಾಲಯ

ಉಪ್ಪರಿಗೆ ಮೇಲೆ ಒಂದಾನೊಂದು ಕಾಲದಲ್ಲಿ ನಿತ್ಯ ಬಳಸುತ್ತಿದ್ದ ಮರದ, ಮಣ್ಣಿನ ಸಲಕರಣೆಗಳನ್ನು ಒಪ್ಪವಾಗಿ ಶೇಖರಿಸಿ ಇಟ್ಟಿದ್ದಾರೆ. ದೇವಪ್ಪ ಅಜ್ರಿಯವರ ಮರದ ಹಾವುಗೆಗಳಿವೆ. ನಾಲ್ಕು ತಲೆಮಾರಿನವರು ಶಿಶುವಾಗಿದ್ದಾಗ ಮಲಗಿದ ಕಲಾತ್ಮಕ ತೊಟ್ಟಿಲು, ಕರಟದಿಂದ ಮಾಡಿದ ಸೌಟುಗಳನ್ನು ಸಿಕ್ಕಿಸಿಡುತ್ತಿದ್ದ ವಿಶಿಷ್ಟವಾದ ಮರದ ಹಲಗೆಯ ನಿಲುವಿದೆ. ಟಿಪ್ಪುವಿನ ಕಾಲದ ಖಡ್ಗ, ನಶ್ಯ ಮಾಡುತ್ತಿದ್ದ ಸಲಕರಣೆಗಳು, ಒನಕೆ, ಚಕ್ಕುಲಿ ಒತ್ತು, ಅಳತೆ ಸಾಮಗ್ರಿಗಳಾದ ಸೇರು, ಕಳಸೆಗಳು, ಹಳೇ ಕಾಲದ ಕನ್ನಡಿ, ಶತಮಾನದ ಹಿಂದಿನ ಮಂಚಗಳು, ಗಾಜಿನ ವಿಶಿಷ್ಟ ದೀಪಗಳು– ಹೀಗೆ ಅದೊಂದು ವಸ್ತು ಸಂಗ್ರಹಾಲಯವೇ ಆಗಿದೆ.

ಆ ಕಾಲದಲ್ಲಿ ಪ್ರತಿದಿನ ರಾತ್ರಿ ಬೀಡಿನ ಸುತ್ತ ಪಹರೆ ಕಾಯುವ ಹೊಣೆ ಊರ ಮಂದಿಯದಾಗಿತ್ತು. ಊರಿನ ಒಂದು ಮನೆಯವರು ರೋಂದುಗೋಲು ಎಂಬ ವಿಶಿಷ್ಟ ದೊಣ್ಣೆ ಕೈಯಲ್ಲಿ ಹಿಡಿದು ರಾತ್ರಿ ಪಹರೆ ಮಾಡಬೇಕಿತ್ತು. ಒಂದು ರಾತ್ರಿ ಪಹರೆ ಮುಗಿಸಿದವನು ರೋಂದುಗೋಲನ್ನು ಬೆಳಗ್ಗೆ ಆ ದಿನ ಪಹರೆ ಮಾಡುವವನ ಅಂಗಳದಲ್ಲಿ ಇರಿಸಿ ಹೋಗಬೇಕು. ಅಂತಹ ರೋಂದುಗೋಲೂ ಇಲ್ಲಿದೆ. ಮೇಲ್ನೋಟಕ್ಕೆ ಹಿಡಿಕೆಯಿರುವ ದೊಣ್ಣೆಯ ಹಿಡಿಕೆಯನ್ನು ಎಳೆದರೆ ಖಡ್ಗ ಹೊರ ಬರುತ್ತದೆ! ತಾಡವಾಲೆಯ ಅಮೂಲ್ಯ ಗ್ರಂಥಗಳನ್ನು ಕೂಡ ಇಲ್ಲಿ ಜೋಪಾನವಾಗಿಟ್ಟಿದ್ದಾರೆ. ಚಂದಯ್ಯ ಅಜ್ರಿ ಚಂಡೆ ಮದ್ದಳೆಯಂತಹ ಹಿಮ್ಮೇಳ ವಾದಕರಾಗಿದ್ದರು. ಮಳೆಗಾಲದಲ್ಲಿ ಯಕ್ಷಗಾನ ತಾಳ ಮದ್ದಳೆಗಳನ್ನು ಮಾಡಿಸುತ್ತಿದ್ದರು. ಅವರ ಹಿಮ್ಮೇಳಗಳ ಸಾಕ್ಷಿಗಳು ಉಪ್ಪರಿಗೆಯಲ್ಲಿ ಸುರಕ್ಷಿತವಾಗಿವೆ. ಸುತ್ತಲಿನ ಪ್ರಕೃತಿ ನೋಟವನ್ನು ಸವಿಯಲು ಉಪ್ಪರಿಗೆಯಲ್ಲಿ ಅವರು ಮಾಡಿಸಿದ್ದ ಬಾಲ್ಕನಿಗೆ ಇಂಗ್ಲೆಂಡಿನಿಂದ ತರಿಸಿದ ಟೈಲ್ಸ್ ಹಾಸಿದ್ದು ಅದಿನ್ನೂ ಬಣ್ಣ ಕಳೆದುಕೊಳ್ಳದೆ ಹೊಸದರಂತಿದೆ. ಈಗಲೂ ಮೂರು ಮಂದಿ ಕೆಲಸಗಾರರು ಇಡೀ ಮನೆಯನ್ನು ಚೊಕ್ಕಟವಾಗಿಡಲು ಶ್ರಮಿಸುತ್ತಾರೆ,

ಬಾಗಿಲು ಇಲ್ಲದ ಎರಡು ದ್ವಾರಗಳು ಕಮಾನಿನಂತೆ ಇವೆ. ಉಳಿದ ದ್ವಾರಗಳಿಗೆ ವಿಶಿಷ್ಟ ಕೆತ್ತನೆಯ ಚೌಕಟ್ಟುಗಳು, ಬಾಗಿಲುಗಳಿವೆ. ಮುಚ್ಚಿದರೆ ಕಿಟಕಿಗೆ ಬಾಗಿಲು; ತೆರೆದು ಬಿಡಿಸಿದರೆ ಅದು ಮಲಗುವ ಮಂಚವಾಗುತ್ತದೆ! ಹಳೆಯ ಕಪಾಟುಗಳ ನೋಟವೇ ಪ್ರತ್ಯೇಕ. ಇನ್ನೊಂದೆಡೆ ಕಪಾಟೆಂದೇ ಭ್ರಮಿಸಿದರೆ ಅದು ಕಪಾಟಲ್ಲ; ಒಡವೆ ವಸ್ತುಗಳನ್ನು ಸುರಕ್ಷಿತವಾಗಿಡುವ ರಹಸ್ಯ ಕೋಣೆಯ ಬಾಗಿಲು! ಚಾವಡಿಯಲ್ಲಿ ದೈವಗಳ ಆವಾಸವಿರುವ ಕೊಠಡಿಯಿದೆ, ಒಳಗೆ ಪೂಜಾ ಮಂದಿರವಿದೆ. ಸಾಮಗ್ರಿಗಳ ಜಮಾ ಉಗ್ರಾಣವಿದೆ.ಗಂಧ ತೇಯುವ ವಿಶಾಲವಾದ ಕಲ್ಲು, ಜಾತ್ರೆಗಳಿಗೆ ಉರಿಸಿಡುವ ಆಳೆತ್ತರದ ಕಂಚಿನ ದೀಪಗಳಿವೆ. ಮನೆಯ ಆವರಣದ ಒಳಗೇ ಬಾವಿಯ ವ್ಯವಸ್ಥೆಯಿದೆ.

'ಹಿಂದೆ ನೂರು ದನಗಳಿದ್ದ ಮನೆ ಇದು' ಎಂದು ನೆನಪಿಸಿಕೊಳ್ಳುವ ಮನೆಯೊಡತಿ ಆಶಾ ಆಗ ದನಗಳು ನೀರು ಕುಡಿಯುತ್ತಿದ್ದ ಎರಡು ಕಲ್ಲಿನ ಭಾರೀ ತೊಟ್ಟಿಗಳನ್ನು ತೋರಿಸುತ್ತಾರೆ. ದನ, ಎತ್ತು, ಎಮ್ಮೆಗಳಿಗೆ ಪ್ರತ್ಯೇಕ ಹಟ್ಟಿಗಳಿದ್ದವು. ಕಂಬಳದ ಕೋಣಗಳನ್ನು ಸಾಕಿ ಮೂರು ಕಂಬಳಗಳನ್ನೂ ಮಾಡಿಸುತ್ತಿದ್ದರು.ನಿತ್ಯ ಕೆಲಸಕ್ಕೆ ಹದಿನೈದು ಜನ ಕೆಲಸಗಾರರಿದ್ದರು ಎಂದು ಹಳೆಯದನ್ನು ಮೆಲುಕು ಹಾಕುತ್ತಾರೆ.

ವಿಜಯನಗರದ ಅರಸರು ಮಂಗಳೂರಿಗೆ ಹೋಗುವಾಗ ಗುತ್ತಿನ ಸನಿಹದ ಚಂದದ ಊರೆನಿಸಿದ ಚಂದ್ಕೂರಿನ ಮೂಲಕ ತೆರಳುತ್ತಿದ್ದರೆಂದು ಸ್ಮರಿಸುತ್ತಾರೆ ಧನಂಜಯ ಅಜ್ರಿ. "ಜಮಾಲಾಬಾದ್ ಕೋಟೆಯಿಂದ ಟಿಪ್ಪು ಸುಲ್ತಾನರ ಭಂಟರು ಫಿರಂಗಿಯಲ್ಲಿ ಸಿಡಿಸುತ್ತಿದ್ದ ಗುಂಡುಗಳು ನಮ್ಮ ಮನೆಯ ಸುತ್ತಲೂ ಬೀಳುತ್ತಿದ್ದವು. ಈಗಲೂ ಇಲ್ಲಿ ಅಂತಹ ಗುಂಡುಗಳು ಸಿಗುತ್ತವೆ. ಒಂದು ಹಲಸಿನಮರ ಕಡಿಸಿದಾಗ ಅದರ ತುಂಬ ಚುಚ್ಚಿಕೊಂಡ ಗುಂಡುಗಳೇ ಇದ್ದವು" ಎನ್ನುತ್ತಾರೆ. ನಡ ಗುತ್ತಿನ ಮನೆ ಈಗಲೂ ಉಳಿದುಕೊಂಡಿರುವ ಪರಂಪರೆಯ ಒಂದು ಕೊಂಡಿ. ತುಳು ಸಂಸ್ಕೃತಿಯ ವೈಭೋಗದ ಹಿನ್ನೋಟ.

(ಧನಂಜಯ ಅಜ್ರಿಯವರ ಸಂಪರ್ಕ ಸಂಖ್ಯೆ: 98459–84417)